ಸ್ಮರಿಸಿ ಬದುಕಿರೋ

ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ

ದುರಿತ ತರಿದು ಪೊರೆವ ವಿಜಯಗುರುಗಳೆಂಬರ 1

ದಾಸರಾಯನ ದಯವ ಸೂಸಿ ಪಡೆದನಾ

ದೋಷರಹಿತನಾ ಸಂತೋಷಭರಿತನಾ ।

ಜ್ಞಾನವಂತನಾ ಬಲುನಿಧಾನಿ ಶಾಂತನಾ

ಮಾನ್ಯವಂತನ ಬಹುವದಾನ್ಯದಾತನ ।

ಹರಿಯಭಜಿಸುವ ನರಹರಿಯ ಯಜಿಸುವಾ ।

ದುರಿತತರಿಸುವಾ ಜನಕೆ ಹರುಷಸುರಿಸುವ ।

ಮೋದಭರಿತನ ಪಂಚಭೇದವರಿತನ ।

ಸಾಧುಚರಿತನ ಮನೋವಿಷಾದ ಮರೆತನ ।

ಇವರ ನಂಬಿದ ಜನಕೆ ಭವವಿದೆಂಬುದು ।

ಹವಣವಾಗದು ನಮ್ಮವರ ಮತವಿದು ।

ಪಾಪಕೋಟಿಯ ರಾಶಿ ಲೇಪವಾಗದು ।

ತಾಪಕಳೆವನು ಬಲುದಯಾಪಯೋನಿಧಿ ।

ಕವನ ರೂಪದಿ ಹರಿಯ ಸ್ತವನ ಮಾಡಿದ ।

ಭುವನ ಬೇಡಿದ ಮಾಧವನ ನೋಡಿದ

ರಂಗನೆಂದನ ಭವವು ಹಿಂಗಿತೆಂದನಾ ।

ಮಂಗಳಾಂಗನ ಅಂತರಂಗವರಿತನಾ ।

ಕಾಶಿನಗರದಲ್ಲಿದ್ದ ವ್ಯಾಸದೇವನ ದಯವ ।

ಸೂಸಿಪಡೆದನಾ ಉಲ್ಲಾಸ ಭರಿತನ ।

ಚಿಂತೆಬ್ಯಾಡಿರೋ ನಿಶ್ಚಿಂತರಾಗಿರೋ ।

ಶಾಂತಗುರುಗಳ ಪಾದವಾಂತು ನಂಬಿರೋ ।

ಖೇದವಾಗದೋ ನಿಮಗೆ ಮೋದವಾಹುದೋ ।

ಆದಿದೇವನಾ ಸುಪ್ರಸಾದವಾಹುದೋ ।

ತಾಪತಡೆವನೋ ಬಂದ ಪಾಪಕಡಿವನೋ ।

ಶ್ರೀಪತೀಶನ ಪದಸಮೀಪವಿಡುವನೋ

ಗಂಗೆಯಿಂದರೆ ಮಲವು ಹಿಂಗಿತಲ್ಲದೇ ।

ರಂಗನೊಲಿಯನೋ ಭಕ್ತ ಸಂಘ ದೊರೆಯದೆ ।

ವೇದವೋದಲು ಬರಿದೆ ವಾದಮಾಡಲು ।

ಹಾದಿದೊರೆಯದು ಬುಧರ ಪಾದನಂಬದೆ ।

ಲೆವಿಲ್ಲದ ದೇಶ ತುಕ್ಕಿ ಬಂದರೂ

ದುಃಖವಲ್ಲದೆ ಲೇಶ ಭಕ್ತಿ ದೊರಕದು ।

ದಾನಮಾಡಲು ದಿವ್ಯಗಾನಪಾಡಲು ।

ಜ್ಞಾನದೊರಯದು ಇವರಧೀನವಾಗದೆ ।

ನಿಷ್ಠೆಯಾತಕೆ ಕಂಡ ಕಷ್ಟವ್ಯಾತಕೆ । ದಿಟ್ಟಗುರುಗಳ ಪಾದ ಮುಟ್ಟಿ ಭಜಿಸಿರೋ ।

ಪೂಜೆ ಮಾಡಲು ಕಂಡ ಗೋಜುಬೀಳಲು । ಬೀಜಮಾತಿನ ಫಲ ಸಹಜ ದೊರಕದು ।

ಸುರರು ಎಲ್ಲರು ಇವರ ಕರವ ಪಿಡಿವರೋ । ತರಳರಂದದಿ ಹಿಂದೆ ತಿರುಗುತಿಪ್ಪರು ।

ಗ್ರಹಗಳೆಲ್ಲವು ಇವರ್ಗೆ ಸಹಾಯ ಮಾಡುತ ।

ಅಹೋರಾತ್ರಿಲಿ ಸುಖದ ನಿವಹ ಕೊಡುವವು ।

ವ್ಯಾಧಿಬಾರದೋ ದೇಹಬಾದೆ ತಟ್ಟದೋ ।

ಆದಿದೇವನ ಸುಪ್ರಸಾದವಾಹುದೋ।

ಪತಿತಪಾಮರ ಮಂದಮತಿಯು ನಾ ಬಲು ।

ತುತಿಸಲಾಪನೇ ಇವರ ಅತಿಶಂಗಳ ।

ಕರುಣದಿಂದಲಿ ಎಮ್ಮ ಪೊರೆವನಲ್ಲದೆ ।

ದುರಿತಕೋಟಿಯ ಬೇಗ ತರಿವ ದಯದಲಿ ।

ಮಂದಮತಿಗಳು ಇವರ ಚಂದವರಿಯದೆ ।

ನಿಂದಿಸುವರು ಭವದ ಬಂಧ ತಪ್ಪದು ।

ಇಂದಿರಾಪತಿ ಇವರ ಮುಂದೆ ಕುಣಿವನು ।

ಅಂದವಚನವ ನಿಜಕೆ ತಂದುತೋರ್ಪನು ।

ಉದಯಕಾಲದಿ ಈ ಪದವ ಪಠಿಸಲು

ಮದಡನಾದರು ಜ್ಞಾನ ಉದಯವಾಹುದು ।

ಸಟೆಯಿದಲ್ಲವೋ ವ್ಯಾಸವಿಠಲ ಬಲ್ಲನೋ ।

ಪಠಿಸಬಹುದಿದು ಕೇಳಿ ಕುಟಿಲರಹಿತರು ।